ಕರ್ನಾಟಕ ಸರ್ಕಾರ

ಸಂಖ್ಯೆ : ತಾಂತ್ರಿಕ:ಸುವಿವ.೨೦:೨೦೦೨-೨೦೦೩.

ನಿರ್ದೇಶಕರವರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು, ದಿನಾಂಕ

ಭೂದಾಖಲೆಗಳ ಸಹಾಯಕ ನಿರ್ದೇಶಕರು,
ಉಪ ವಿಭಾಗ,

ಮಾನ್ಯರೆ,

ವಿಷಯ: ಮಾನ್ಯ ಮಂತ್ರಿಗಳ ಮಾದರಿ ಪಟ್ಟಣ ವಸತಿ ಯೋಜನೆ
ಮತ್ತು ಗೃಹ ಮಂಡಳಿಯ ವಸತಿ ಯೋಜನೆ —
ಕಂದಾಯ ದಾಖಲಾತಿಗಳ ಅವಶ್ಯಕತೆ ಬಗ್ಗೆ.

ಉಲ್ಲೇಖ: ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು ಇವರ ಪತ್ರ ಸಂಖ್ಯೆ: ಕಗೃಮ:ಭೂಸ್ವಾವಿ:
೩೯:೨೦೦೨-೨೦೦೩ ದಿನಾಂಕ ೨.೦೮.೨೦೦೨.

...

ಗೃಹ ಆಯುಕ್ತರು ಉಲ್ಲೇಖದ ತಮ್ಮ ಪತ್ರದಲ್ಲಿ ಮೇಲೆ ಪ್ರಸ್ತಾಪಿಸಿದ ಯೋಜನೆಯನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದ್ದು, ಅಗತ್ಯ ಜಮೀನುಗಳನ್ನು ಪಡೆಯಲು ಕಾರ್ಯಕ್ರಮ ರೂಪಿಸಿರುತ್ತಾರೆ. ಈ ಬಗ್ಗೆ ಸಂಬಂಧಿಸಿದ ಭೂಮಾಪನ ದಾಖಲೆಗಳನ್ನು ಪಡೆಯಲು ಅವರ ಭೂಮಾಪಕರು ಭೂಮಾಪನ ಕಛೇರಿಗಳಿಗೆ ಬಂದಾಗ ತ್ವರಿತವಾಗಿ ದಾಖಲಾತಿಗಳನ್ನು ಒದಗಿಸಿ ಸಹಕಾರ ನೀಡುವಂತೆ ಕೋರಿರುತ್ತಾರೆ. ಕಾರಣ ಈ ಕೆಳಗಿನಂತೆ ಸೂಚನೆಗಳನ್ನು ನೀಡಲಾಗಿದೆ.

ರಾಜ್ಯದ ಬೇರೆ ಬೇರೆ ಇಲಾಖೆಗಳಲ್ಲಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ನಮ್ಮ ಇಲಾಖೆಯ ಭೂಮಾಪಕರುಗಳು ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿರುತ್ತಾರೆ. ಈ ಭೂಮಾಪಕರುಗಳು ಕಛೇರಿ ಉಪಯೋಗಕ್ಕಾಗಿ ಸಂಬಂಧಿಸಿದ ಗ್ರಾಮದ ಸರ್ವೆ ನಂಬರುಗಳ ನಕಲುಗಳು ಅಗತ್ಯವಿದೆಯೆಂದು ಅವರ ಕಛೇರಿ ಮುಖ್ಯಸ್ಥರಿಂದ ಪತ್ರ ತಂದಲ್ಲಿ, ಸದರಿ ನಕಲುಗಳನ್ನು ಮಾಡಿಕೊಳ್ಳಲು ಅವಕಾಶ ನೀಡತಕ್ಕದ್ದು, ಒಂದು ವೇಳೆ ದೃಢೀಕರಣ ನಕಲುಗಳನ್ನು ಬಯಸಿದಲ್ಲಿ ನಿಯಮಾನುಸಾರ ಅಗತ್ಯ ಶುಲ್ಕ ಪಡೆದು ಕೂಡಲೇ ವಿತರಿಸುವಂತೆ ತಿಳಿಸಲಾಗಿದೆ.

ನಿಮ್ಮ ವಿಶ್ವಾಸಿ,

ನಿರ್ದೇಶಕರ ಪರವಾಗಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು:-

ಎಲ್ಲಾ ಭೂದಾಖಲೆಗಳ ಜಂಟಿ ನಿರ್ದೇಶಕರು :: ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಮತ್ತು ಎಲ್ಲಾ ತಾಲ್ಲೂಕು ಭೂಮಾಪನ ಕಛೇರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.